**ಕರ್ನಾಟಕ ವಿಧಾನ ಪರಿಷತ್ತು**

**ಸದಸ್ಯರ ಹೆಸರು** : ಶ್ರೀ ಎಂ.ಎಲ್ ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 139 (1522)

**ಉತ್ತರಿಸಬೇಕಾದ ದಿನಾಂಕ** : 19.12.2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿಗೆ ಕುಡಿಯುವ ನೀರು ಸರಬರಾಜಿಗಾಗಿ ಮಾರ್ಕಂಡೇಯ ಜಲಾಶಯ ಯೋಜನೆಗೆ ಸರ್ಕಾರ ಖರ್ಚು ಮಾಡಿರುವ ಒಟ್ಟು ಯೋಜನಾ ವೆಚ್ಚ ಎಷ್ಟು; (ಪೂರ್ಣವಾದ ವಿವರ ನೀಡುವುದು) | ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಮಾರ್ಕಂಡೇಯ ಜಲಾಶಯದಿಂದ ತಾಲ್ಲೂಕಿನ 184 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜಿನ ಯೋಜನೆಗೆ ವೇರಿಯೇಷನ್ ಮತ್ತು EIRL (Extra item rate list) ಸೇರಿದಂತೆ ಒಟ್ಟು ರೂ.4321.00 ಲಕ್ಷಗಳಿಗೆ ಅನುಮೋದನೆಯಾಗಿದ್ದು, ಈ ಪೈಕಿ ಯೋಜನೆಗೆ ಇದುವರೆಗೂ ರೂ. 4148.00 ಲಕ್ಷಗಳು ವೆಚ್ಚವಾಗಿರುತ್ತದೆ. |
| ಆ) | ಸದರಿ ಜಲಾಶಯದಿಂದ ಮಾಲೂರು ತಾಲ್ಲೂಕಿನ 6 ವಲಯಗಳ 184 ಜನವಸತಿಗಳಿಗೆ ಕುಡಿಯುವ ನೀರಿನ ಸರಬರಾಜು ಮಾಡುವ ಉದ್ದೇಶಿತ ಯೋಜನೆ ಪ್ರಸ್ತುತ ಸಂಪೂರ್ಣ ಸ್ಥಗಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕಾರಣಕ್ಕಾಗಿ ಕಾಮಗಾರಿ/ಯೋಜನೆ ಸ್ಥಗಿತಗೊಂಡಿದೆ; (ಸಂಪೂರ್ಣವಾದ ಮಾಹಿತಿ ನೀಡುವುದು) | ಸದರಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯು ಅಂದಾಜು ಮೊತ್ತ ರೂ.3619 ಲಕ್ಷಗಳಿಗೆ ದಿನಾಂಕ:27-08-2008 ರಲ್ಲಿ ಅನುಮೋದನೆಗೊಂಡಿರುತ್ತದೆ. ಕಾಮಗಾರಿಯನ್ನು ನಿಯಮಾನುಸಾರ M/s SAI SUDHIR INFRASTRUCTURE LTD., Hyderabad ರವರಿಗೆ ವಹಿಸಿಕೊಡಲಾಗಿರುತ್ತದೆ. ಸದರಿ ಗುತ್ತಿಗೆ ಅವಧಿ 18 ತಿಂಗಳುಗಳಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಲಾಗಿ ಅಚ್ಚುಕಟ್ಟುದಾರರು ದಿನಾಂಕ:19-11-2009ರಲ್ಲಿ ಘನ ನ್ಯಾಯಾಲಯದಲ್ಲಿ ದಾವೆ ಹೂಡಿ ತಡೆಯಾಜ್ಞೆ ತಂದಿರುತ್ತಾರೆ. ಘನ ನ್ಯಾಯಾಲಯವು ದಿನಾಂಕ:10-08-2010ರಲ್ಲಿ ಕಾಮಗಾರಿಯನ್ನು ಮುಂದುವರೆಸಿ ಪೂರ್ಣಗೊಳಿಸಲು ನಿರ್ದೇಶನ ನೀಡಿ ಆದೇಶಿಸಿರುತ್ತದೆ. ಸದರಿ ಕಾಮಗಾರಿಯನ್ನು ಗುತ್ತಿಗೆದಾರರು ತದನಂತರ ಪೂರ್ಣಗೊಳಿಸಿ ದಿನಾಂಕ:01-02-2013 ರಂದು ಡೆಡ್ ಸ್ಟೋರೇಜ್‌ನಲ್ಲಿ ಲಭ್ಯವಿದ್ದ ನೀರನ್ನು ಏರುಕೊಳವೆಗಳ ಮೂಲಕ ಟ್ರಯಲ್ ರನ್ ಮುಖಾಂತರ ಶುದ್ಧೀಕರಣ ಘಟಕವನ್ನು ಯಶಸ್ವಿಯಾಗಿ ಚಾಲನೆಗೊಳಿಸಿರುತ್ತಾರೆ. ತದನಂತರ |
| ಇ) | ಮಾರ್ಕಂಡೇಯ ಜಲಾಶಯ ಯೋಜನೆ ಸ್ಥಗಿತಗೊಂಡಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಪೂರ್ಣವಾದ ಮಾಹಿತಿ ನೀಡುವುದು) | |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| ಈ) | ಉದ್ದೇಶಿತ 184 ಜನವಸತಿಗಳಿಗೆ ಕುಡಿಯುವ ನೀರು ಯಾವ ಕಾಲಮಿತಿಯೊಳಗೆ ಸರಬರಾಜು ಮಾಡಲಾಗುವುದು; (ವಿವರ ಒದಗಿಸುವುದು) | ಕೋಲಾರ ಜಿಲ್ಲೆಯು 5 ವರ್ಷಗಳ ಕಾಲ ಭೀಕರ ಬರಪೀಡಿತವಾಗಿದ್ದು, ಮಳೆ ಇಲ್ಲದೆ ಜಲಾಶಯದಲ್ಲಿ ನೀರು ಶೇಖರಣೆಯಾಗಿರುವುದಿಲ್ಲ. ನಂತರ 2017ರಲ್ಲಿ ಜಿಲ್ಲೆಯಲ್ಲಿ ಮಳೆಯಾಗಿ ಜಲಾಶಯದಲ್ಲಿ ಶೇಖರಣೆಯಾದ ನೀರನ್ನು ಉಪಯೋಗಿಸಿ 6 ವಲಯದ 184 ಜನವಸತಿಗಳಿಗೆ ಕುಡಿಯುವ ನೀರನ್ನು ಒದಗಿಸಲು |
| ಉ) | ಈ ಯೋಜನೆಯಡಿಯಲ್ಲಿ ಗುತ್ತಿಗೆದಾರರ ಮೇಲೆ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣವಾದ ಮಾಹಿತಿ ನೀಡುವುದು) | ಯೋಜಿಸಲಾಯಿತು. ಆದರೆ, 5 ವರ್ಷಗಳ ಕಾಲ ರಸ್ತೆಬದಿಯಲ್ಲಿ ಅರಣ್ಯೀಕರಣ, ಟೆಲಿಫೋನ್ ಮಾರ್ಗಗಳಿಗಾಗಿ ಅಗೆತ, ಚರಂಡಿ ನಿರ್ಮಾಣ ಮತ್ತು ಉದ್ಯೋಗಖಾತ್ರಿ ಯೋಜನೆ ಕಾಮಗಾರಿಗಳಿಗಾಗಿ ರಸ್ತೆ ಅಗೆತದಿಂದಾಗಿ ಈ ಹಿಂದೆ 2010-11ರಲ್ಲಿ ರಸ್ತೆಬದಿಯಲ್ಲಿ ಅಳವಡಿಸಿದ್ದ ಏರುಕೊಳವೆ ಮಾರ್ಗಗಳು ಹಾಳಾಗಿ ಮೋಟರ್ ಪಂಪ್ ಅನ್ನು ಚಾಲನೆಗೊಳಿಸಿದರೂ ನೀರು ಸರಬರಾಜು ಆಗಿರುವುದಿಲ್ಲ. ವಲಯ-01ರಲ್ಲಿ ಹಾಳಾಗಿದ್ದ ಕೊಳವೆಗಳನ್ನು ಗುತ್ತಿಗೆದಾರರು ಹೊಸ ಪೈಪ್ ಅಳವಡಿಸಿ ಕುಡಿಯುವ ನೀರನ್ನು ಕೆಲವು ದಿನಗಳ ಕಾಲ ಒದಗಿಸಿರುತ್ತಾರೆ. ನಂತರ ಸದರಿ ಕಾಮಗಾರಿಯಲ್ಲಿ ಎಕ್ಸ್ ಪ್ರೆಸ್ ಫೀಡರ್ ಲೈನ್ ಚಾರ್ಜ್ ಮಾಡಿ 184 ಜನವಸತಿಗಳಿಗೆ ನೀರನ್ನು ಒದಗಿಸಲು ಟ್ರಯಲ್ ರನ್ ನಡೆಸಿ ನ್ಯೂನ್ಯತೆಗಳಿದ್ದಲ್ಲಿ ಸರಿಪಡಿಸಿ, ಎರಡು ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಕೈಗೊಳ್ಳಬೇಕಾಗಿದ್ದು ಹಲವು ನೋಟಿಸ್ ಗಳನ್ನು ನೀಡಿದ್ದಾಗ್ಯೂ ಗುತ್ತಿಗೆದಾರರು ಕಾಮಗಾರಿ ಪ್ರಕ್ರಿಯೆ ಸ್ಥಗಿತಗೊಳಿಸಿರುತ್ತಾರೆ<br>ಈ ಹಿನ್ನೆಲೆಯಲ್ಲಿ ಸದರಿ ಯೋಜನೆಯ ಗುತ್ತಿಗೆದಾರರು ಕಾಮಗಾರಿಯನ್ನು ಸರಿಯಾಗಿ ನಿರ್ವಹಿಸದ ಕಾರಣ ಟೆಂಡರ್ ಅನ್ನು ರದ್ದುಪಡಿಸಿ ಗುತ್ತಿಗೆದಾರರ ಮೇಲೆ ಟೆಂಡರ್ ನಿಯಮಾವಳಿಯಂತೆ ಕ್ರಮವಹಿಸಲಾಗುತ್ತಿದೆ. ಮುಂದುವರೆದು, ಯೋಜನೆಯ ಬಾಕಿ ಕಾಮಗಾರಿ ಒಳಗೊಂಡಂತೆ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಟೆಂಡರ್ ಆಹ್ವಾನಿಸಿ ಕಾಮಗಾರಿಯನ್ನು ಪೂರ್ಣವಾಗಿ ಅನುಷ್ಠಾನಗೊಳಿಸಲು ಕ್ರಮ ವಹಿಸಬೇಕಿದೆ.<br>ಯೋಜನೆಯ ಅಂತಿಮ ಅಳತೆಯನ್ನು ತೆಗೆದುಕೊಳ್ಳಲು ಸ್ಥಳ ಮಹಜರ್ ಪ್ರಕ್ರಿಯೆಯನ್ನು ಉಪ ವಿಭಾಗದಿಂದ ದಿನಾಂಕ: 11/12/2025 ರಂದು ನಿಗದಿಪಡಿಸಲಾಗಿರುತ್ತದೆ.<br>ಮುಂದುವರೆದು, ಯೋಜನೆಯ ಬಾಕಿ ಕಾಮಗಾರಿ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಒಳಗೊಂಡಂತೆ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಹೊಸದಾಗಿ ಟೆಂಡರ್ ಆಹ್ವಾನಿಸಿ ಉದ್ದೇಶಿತ ಜನವಸತಿಗಳಿಗೆ ಸದರಿ ಯೋಜನೆಯಿಂದ ಕಾರ್ಯಾದೇಶ ನೀಡಿದ 09 ತಿಂಗಳ ಅವಧಿಯೊಳಗೆ ಕುಡಿಯುವ ನೀರು ಒದಗಿಸಲು ಕ್ರಮವಹಿಸಬೇಕಿದೆ. |

ಸಂಖ್ಯೆ:ಗ್ರಾಕುನೀ&ನೈಇ/ಮುಇಂ/ತಾಂತ್ರಿಕ/91/2025-26

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ
ತಂತ್ರಜ್ಞಾನ ಸಚಿವರು,